
ತಮಿಳುನಾಡಿನ ನಾಯನಾರ್ ಸಂತರು – ೧೩


# ನಂಬಿಯಾಂಡರ್ ನಂಬಿ ಮತ್ತು ಶೈವ ಶಾಸ್ತ್ರಗ್ರಂಥಗಳು

ಕಥೆ : ಎಂ. ಜಯಶ್ರೀ ಚಿತ್ರ : ಶಂಕರ್


**1** ತಿರುನರ್‍ಕೈಯಾರ್ ಎಂಬಲ್ಲಿ ಒಂದು ಭಕ್ತ ದಂಪತಿಗಳು ಪ್ರತಿದಿನವೂ ಗಣೇಶನಿಗೆ ಪೂಜೆ ಮಾಡುತ್ತಿದ್ದರು. ದೈವಾನುಗ್ರಹದಿಂದ ಆ ದಂಪತಿಗಳಿಗೆ ಹುಟ್ಟಿದ ಮಗುವಿಗೆ ನಂಬಿ ಎಂದು ಹೆಸರಿಟ್ಟರು.




**2**




**3** ಮರುದಿನ ಬೆಳಗ್ಗೆ ದೇವರಿಗೆ ಅಭಿಷೇಕ ಮಾಡಿ, ಗಣೇಶನ ಮೂರ್ತಿಯ ಮುಂದೆ ನೈವೇದ್ಯವನ್ನು ಇಟ್ಟನು.





**4** ನಂಬಿ ಬಹಳ ಹೊತ್ತು ಕಾದು ನಿಂತರೂ ಗಣೇಶ ಅವನ ಮುಂದೆ ಕಾಣಿಸಿಕೊಳ್ಳಲಿಲ್ಲ. ಕೊನೆಗೆ ಅವನ ಭಕ್ತಿ, ಭಾವಗಳು ತೀವ್ರಗೊಂಡು ನಂಬಿ ಹೇಳತೊಡಗಿದ...



**5** ಗಣೇಶನು ನೈವೇದ್ಯವನ್ನು ಸ್ವೀಕರಿಸಿದ; ನಂಬಿ ಅವನೊಂದಿಗೆ ಆನಂದದಿಂದ ಮಾತನಾಡತೊಡಗಿದ. ಕೂಡಲೇ ನಂಬಿಗೆ ಶಾಲೆಯ ನೆನಪಾಯಿತು.


ಭಗವಾನ್! ನಿನ್ನ ಪೂಜೆ ಮಾಡಿದ್ದರಿಂದ ಇಂದು ಶಾಲೆಗೆ ತಡವಾಗುತ್ತಿದೆ. ನಾನೇನು ಮಾಡಲಿ ?



ಏನೂ ಚಿಂತಿಸಬೇಡ, ಮಗೂ! ನಿನಗೆ ಎಲ್ಲವನ್ನೂ ನಾನೇ ಕಲಿಸಿಕೊಡುತ್ತೇನೆ.


**6** ಗಣೇಶನ ಅನುಗ್ರಹಕ್ಕೆ ಪಾತ್ರನಾದ್ದರಿಂದ ನಂಬಿಗೆ 'ನಂಬಿಯಾಂಡರ್ ನಂಬಿ' ಎಂದೇ ಹೆಸರಾಯಿತು. ಚೋಳ ಸಾಮ್ರಾಜ್ಯದ ರಾಜನಾದ ರಾಜರಾಜ ಚೋಳನು ನಂಬಿಯ ಭಕ್ತಿಯನ್ನು ಕೇಳಿ, ಅವನನ್ನು ಭೇಟಿಯಾಗಲು ತಿರುನರೈಯೂರಿಗೆ ಹೋದ

ಮಗೂ, ನಂಬಿ. ಈ ಹಣ್ಣುಗಳನ್ನು ಭಗವಾನ್ ಗಣೇಶನಿಗೆ ಸಮರ್ಪಿಸು.




ನಂಬಿ ಆ ಹಣ್ಣುಗಳನ್ನು ಗಣೇಶನಿಗೆ ನೈವೇದ್ಯ ಮಾಡಿದ. ಗಣೇಶನು ಅವುಗಳನ್ನು ಸ್ವೀಕರಿಸಿದ. ರಾಜನು ಇದನ್ನು ಕಂಡು ಸಂತೋಷಗೊಂಡ.


**7** ನಂಬಿಯವರೇ, ಮಹಾನ್ ಸಂತರಾದ ಅಪ್ಪರ್, ಸುಂದರರ್ ಮತ್ತು ಸಂಬಂಧರ್ ಇವರು ಶೈವಧರ್ಮದ ಏಳಿಗೆಗಾಗಿ ರಚಿಸಿದ 'ತೇವಾರಂ' ಗ್ರಂಥಗಳು ಜಗತ್ತಿನಿಂದ ದೂರ ಉಳಿದಿವೆ; ಅವುಗಳನ್ನು ರಹಸ್ಯ ಸ್ಥಳದಲ್ಲಿ ಇಟ್ಟಿದ್ದಾರೆ. ನೀವು ಅವುಗಳನ್ನು ಹೊರಗೆ ತರಬೇಕು.



ಎಲ್ಲವೂ ಭಗವಂತನ ಇಚ್ಛೆಯ ಪ್ರಕಾರವೇ ನಡೆಯುವುದು, ಪ್ರಭು!


**8** ನಂಬಿ ಗಣೇಶನ ಬಳಿಗೆ ಹೋಗಿ ಪ್ರಾರ್ಥಿಸಿದ.

ದೇವಾ! ತೇವಾರಂ ಸ್ತೋತ್ರಗಳು ಎಲ್ಲಿವೆ ಎಂಬುದನ್ನು ನನಗೆ ತೋರಿಸಿಕೊಡು.





ಭಗವಾನ್ ಗಣೇಶನು ನಂಬಿಗೆ ಇನ್ನಿತರ ಶೈವ ಸಂತರ ಕಥೆಯನ್ನು ಹೇಳಿದ.

9 ರಾಜರಾಜ ಚೋಳ ಹಾಗೂ ನಂಬಿ ತಿಲ್ಲೈಗೆ ಹೋಗಿ ಭಗವಾನ್ ನಟರಾಜನನ್ನು ಪೂಜಿಸಿದರು. ತಿಲ್ಲೈಯಲ್ಲಿರುವ ಅರ್ಚಕರಿಗೆ ಬೀಗ ಹಾಕಿದ್ದ ಆ ಕೋಣೆಯನ್ನು ತೆರೆಯಲು ಕೇಳಿಕೊಂಡರು.




10 ರಾಜನು ಕೂಡಲೇ ಅಂಬಲವನಂ ದೇವರ ಹಾಗೂ ಮೂವರು ಸಂತರ ಪೂಜೆ ಮಾಡಲು ವ್ಯವಸ್ಥೆ ಮಾಡಿದ. ಮೂವರ ಮೂರ್ತಿಯನ್ನು ಬೀದಿಯಲ್ಲಿ ಮೆರವಣಿಗೆ ಮಾಡುತ್ತ ಆ ಬೀಗ ಹಾಕಿದ ಕೋಣೆಯ ಬಳಿಗೆ ತಂದರು.





ಆದರೂ ಅರ್ಚಕರು ಮೊದಲಿಗೆ, ಸಂತರ ಮೂರ್ತಿಯನ್ನು ತಂದ ಮಾತ್ರಕ್ಕೆ ಬಾಗಿಲು ತೆಗೆಯಲಾಗದು ಎಂದು ಭಾವಿಸಿದರು. ಆದರೆ ನಂಬಿ ಮತ್ತು ರಾಜರಾಜ ಇವರಿಬ್ಬರೂ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ, ಮೂರ್ತಿಯ ಮುಂದೆ ಸಂತರ ಸಾನ್ನಿಧ್ಯವಿದೆ ಎಂದು ತಿಳಿಸಿ ಕೊಟ್ಟಾಗ ಅವರು ಅದಕ್ಕೆ ಒಪ್ಪಿಗೆ ನೀಡಿದರು. ಅವರಿಗೂ ಸಂತರ ಸಾನ್ನಿಧ್ಯ ಅನುಭವಕ್ಕೆ ಬಂತು. ಕೋಣೆಯ ದ್ವಾರವನ್ನು ತೆರೆಯಲಾಯಿತು.


11 ರಾಜ ಮತ್ತು ನಂಬಿ ಆ ಕೋಣೆಯ ಒಳಗೆ ಹೊಕ್ಕಾಗ ಅವರಿಗೆ ಆಘಾತ ಕಾದಿತ್ತು. ಬಹುಪಾಲು ತಾಳೆಯ ಗರಿಯ ಹಸ್ತಪ್ರತಿಗಳನ್ನು ಬಿಳಿ ಇರುವೆಗಳು ತಿಂದು ನಾಶ ಮಾಡಿದ್ದವು. ಆಗ ಅಲ್ಲಿ ಒಂದು ದಿವ್ಯವಾಣಿ ಕೇಳಿಬಂತು.




**12** ದಿವ್ಯವಾಣಿಯು ಹೇಳಿದಂತೆ, ಅವರು ಉಳಿದಿರುವ ಹಸ್ತಪ್ರತಿಯನ್ನು ಸಂಗ್ರಹಿಸಿದರು.




**13** ನಂಬಿಯು ಅಪ್ಪರ್, ಸುಂದರರ್, ಸಂಬಂಧರ್ ಇವರ ಸ್ತೋತ್ರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ, ಏಳು ದಿವ್ಯ ಗ್ರಂಥಗಳನ್ನಾಗಿ ಸಂಕಲನ ಮಾಡಿದ. ಪ್ರಾಚೀನ ಸ್ತೋತ್ರಗಳನ್ನು ಸಂಕಲನ ಮಾಡಿ, ರಾಜನ ಬಯಕೆಯಂತೆ ಅದರಲ್ಲಿ ತನ್ನದೇ ಆದ ಹತ್ತು ರಚನೆಗಳನ್ನೂ ಸೇರಿಸಿದ. ಹೀಗೆ ನಂಬಿಯು ಶೈವ ಮತದ ಹನ್ನೊಂದು ಪವಿತ್ರ ಗ್ರಂಥಗಳನ್ನು ಸಂಕಲನ ಮಾಡಿದ.



**14** ಮುಂದೆ ಅನಪಾಯ ಚೋಳನ (ಕುಲೋತ್ತುಂಗ ಚೋಳ) ಬಯಕೆಯಂತೆ ಶೇಕ್ಕಿಳಾರ್ ಕವಿಯು 'ಪೆರಿಯ ಪುರಾಣಂ' ಕೃತಿಯನ್ನು ರಚಿಸಿ, ಚಿದಂಬರಂನಲ್ಲಿ ಅದನ್ನು ಬಿಡುಗಡೆ ಮಾಡಿದನು. ರಾಜನು ಅದನ್ನು ತಾಮ್ರದ ತಟ್ಟೆಯಲ್ಲಿಟ್ಟು ಪೂಜಿಸಿ, ಹಳೆಯ ಹನ್ನೊಂದು ಪವಿತ್ರ ಗ್ರಂಥಗಳೊಂದಿಗೆ ಇದನ್ನು ಹನ್ನೆರಡನೆಯ ಪವಿತ್ರ ಗ್ರಂಥವಾಗಿ ಪರಿಗಣಿಸಿದನು. ಸಾವಿರಾರು ಹಳೆಯ ತೇವಾರಂ ಸ್ತೋತ್ರಗಳು ಬಿಳಿಯ ಇರುವೆಗಳು ತಿಂದು ನಾಶವಾದವು; ಕೇವಲ 8250 ಸ್ತೋತ್ರಗಳು ಮಾತ್ರವೇ ಇಂದು ಉಳಿದಿವೆ.





**15**

- ಎಳೆಯ ಬಿದಿರು ಸುಲಭವಾಗಿ ಬಾಗಬಹುದು; ಆದರೆ ಅದು ಬೆಳೆದ ಮೇಲೆ ಅದನ್ನು ಬಲವಂತವಾಗಿ ಬಾಗಿಸಿದರೆ, ಅದು ಮುರಿದು ಹೋಗುವುದು. ಎಳೆಯ ಮನಸ್ಸನ್ನು ಸುಲಭವಾಗಿ ಭಗವಂತನ ಕಡೆಗೆ ತಿರುಗಿಸಬಹುದು.
- ಪ್ರಪಂಚದಲ್ಲಿ ಸತ್ಯವನ್ನು ತಿಳಿದವರಲ್ಲಿ ಎರಡು ಬಗೆಯ ಜನರಿದ್ದಾರೆ. ಒಂದು ಬಗೆಯವರು, ಮೌನವಾಗಿ ತಾವು ಮಾತ್ರ ಅದರ ಆನಂದವನ್ನು ಅನುಭವಿಸುತ್ತಾರೆ, ಇತರರ ಬಗ್ಗೆ ಅವರು ಚಿಂತಿಸುವುದಿಲ್ಲ. ಇನ್ನೊಂದು ಬಗೆಯವರು ಸತ್ಯವನ್ನು ಅರಿತ ಮೇಲೆ ತಾವು ಒಬ್ಬರೇ ಅದನ್ನು ಅನುಭವಿಸುವುದರಲ್ಲಿ ಆನಂದಪಡುವುದಿಲ್ಲ; ಉಳಿದವರಿಗೂ ಕೂಗಿ ಹೇಳುತ್ತಾರೆ – ''ಬನ್ನಿ, ನನ್ನೊಂದಿಗೆ ಸತ್ಯವನ್ನು ಅರಿತು ಆನಂದವನ್ನು ಹೊಂದಿ'' ಅಂತ.

— ಶ್ರೀರಾಮಕೃಷ್ಣರು